ಆ) ಅಮಾಯಕರ ವಿರುದ್ಧ ರಾಜಕೀಯ ಸೇಡು ತೀರಿಸಿಕೊಳ್ಳಲು ಸರ್ಕಾರ ಉದ್ದೇಶಿಸಿದೆಯೆ;

ಇ) ಎಷ್ಟು ಮಂದಿಯ ಮೇಲೆ ಕೇಸು ದಾಖಲಿಸಲಾಗಿದೆ;

ಈ) ನಿಜವಾದ ಅಮಾಯಕರನ್ನು ಗುರುತಿಸಿ ಅವರ ಮೇಲೆ ಹಾಕಿದ ಕೇಸನ್ನು ವಾಪಸು ಪಡೆಯಲಾಗುವುದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು):

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ಕುಂದಾಪುರ ವೃತ್ತದ ಸರಹದ್ದಿನಲ್ಲಿ 4 ಜನರ ಮೇಲೆ ಮೊಕದ್ದಮ್ಮೆ ದಾಖಲಿಸಲಾಗಿದೆ.

ಈ) ಅಪರಾಧಿಗಳು ಅಮಾಯಕರೆಂದು ಕರಡು ಬಂದಲ್ಲಿ, ಇಂಥಹವರ ವಿರುದ್ಧ ದಾಖಲಾಗಿರುವ ಮೊಕ್ಕದ್ದಮೆಗಳನ್ನು ಹಿಂತೆಗೆದುಕೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.

ಮುಂಡರಗಿ ತಾಲ್ಲೂಕಿನಲ್ಲಿ ಅಧಿಕಾರಿಗಳನ್ನು ಬೆದರಿಸಿ ಹಣ ವಸೂಲಿ

2624 (3207) : ಶ್ರೀ ಪಾಟೀಲ್ ಸಿದ್ಧಲಿಂಗನಗೌಡ ಸಿದ್ದನಗೌಡ (ಮುಂಡರಗಿ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮುಂಡರಗಿ ತಾಲ್ಲೂಕಿನಲ್ಲಿ ವಿಧಾನಸಭೆಯ ಚುನಾವಣೆಗೆ ಸ್ಪರ್ಧಿಸಿ ಸೋತ ಅಭ್ಯರ್ಥಿಗಳಲ್ಲಿ ಕೆಲವರು ಅಧಿಕಾರಿಗಳನ್ನು ಬೆದರಿಸಿ ಹಣ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಾರದಿದ್ದರೆ, ಸಿ.ಬಿ.ಐ. ತನಿಖೆ ಮಾಡಿಸಿ ಕ್ರಮ ಕೈಗೊಳ್ಳಲಾಗುತ್ತದೆಯೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು):

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ನಕಲಿ ಛಾಪಾ ಕಾಗದ ಪ್ರಕರಣ

2639 (3006) : ಶ್ರೀ ರವೀಂದ್ರನಾಥ ಎಸ್.ಎ. (ಮಾಯಕೊಂಡ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನಕಲಿ ಛಾಪಾ ಕಾಗದ ಹಗರಣ ತನಿಖೆಯು ವಿಳಂಬವಾಗುತ್ತಿರಲು ಕಾರಣಗಳೇನು;

ಆ) ಇದರ ವಿಚಾರಣೆಗೆ ಯಾರನ್ನು ನೇಮಕ ಮಾಡಲಾಗಿದೆ; ತನಿಖೆ ಯಾವ ಹಣತದಲ್ಲಿದೆ;

ಇ) ಈ ತನಿಖೆ ಕಾರ್ಯ ಕೈಗೊಳ್ಳಲು ಸಿಬ್ಬಂದಿಗಳ ಕೊರತೆ, ಅಗತ್ಯ ಸಲಕರಣೆಗಳ ಅಭಾವ ಕಾರಣವೇ;

ಈ) ತನಿಖೆ ಕಾರ್ಯಕ್ಕೆ ಯಾವಾಗ ವಿಚಾರಣಾಧಿಕಾರಿಯನ್ನು (ನ್ಯಾಯಾದೀಶರು) ನೇಮಿಸಲಾಗುವುದು;

ಉ) ಇದರಿಂದ ವಿಚಾರಣೆಗೆ ಹಿನ್ನೆಡೆ ಉಂಟಾಗಿ ಇದು ಆರೋಪಿಗಳಿಗೆ ಪರವಲ್ಲವೇ;

ಊ) ತನಿಖೆ ಕಾರ್ಯವನ್ನು ಯಾವಾಗ ಕೈಗೆತ್ತಿಕೊಂಡು ವಿಚಾರಣೆ ಪೂರ್ಣ ಗೊಳಿಸಲಾಗುತ್ತದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು):

ಅ) ತನಿಖೆಯಲ್ಲಿ ವಿಳಂಬವಾಗಿರುವುದಿಲ್ಲ.

ಆ) ಈ ಪ್ರಕರಣಗಳ ತನಿಖೆಗಾಗಿ ಶ್ರೀ ಆರ್. ಶ್ರೀಕುಮಾರ್, ಅವರ ಪೊಲೀಸ್